**ಸಹಕಾರಿ ಕಾರ್ಖಾನೆಗಳಿಗೆ ತಂತ್ರಜ್ಞಾನವನ್ನು ನೇಮಕ ಮಾಡುವ ವಿಚಾರ.**

3440- ಶ್ರೀ ಬಾಬಾಗೌಡ ಪಾಟೀಲ (ಕಿತ್ತೂರು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಸಹಕಾರಿ ರಂಗದಲ್ಲಿಯ ಕಾರ್ಖಾನೆಗಳಿಗೆ ಕಾರ್ಯ ನಿರ್ವಾಹಕ ನಿರ್ದೇಶಕರನ್ನಾಗಿ ತಂತ್ರಜ್ಞಾನವನ್ನು ನೇಮಕ ಮಾಡುವ ವಿಚಾರ ಸರಕಾರಕ್ಕಿದೆಯೇ?*

*ಆ) ಮಹಾರಾಷ್ಟ್ರ ರಾಜ್ಯ ಸರಕಾರ ಈ ರೀತಿ ತಂತ್ರಜ್ಞರನ್ನು ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ನೇಮಕಾತಿ ಮಾಡಿ ಕಾರ್ಖಾನೆಗಳನ್ನು ಊರ್ಜಿತಾವಸ್ಥೆಗೆ ತಲುಪಿಸಿದದ್ದಾರೆಂದು ಸರ್ಕಾರಕ್ಕೆ ತಿಳಿದಿದೆಯೇ?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು).

ಅ) ಇದೆ.

ಆ) ಹೌದು.

**ಸಹಕಾರಿ ಸಂಘದ ಕಾರ್ಯಕ್ಷೇತ್ರದಲ್ಲಿ ನಿರ್ದೇಶಕರನ್ನು ಆಯ್ಕೆ ಮಾಡುವ ಪದ್ಧತಿ.**

3439 -ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಸಹಕಾರಿ ಸಂಘದ ಕಾರ್ಯಕ್ಷೇತ್ರದಲ್ಲಿ ಮತದಾರ ವೃತ್ತಗಳನ್ನು ಮಾಡಿ ಪ್ರತಿ ವೃತ್ತದಿಂದ ಒಬ್ಬ ನಿರ್ದೇಶಕರನ್ನು ಆಯ್ಕೆ ಮಾಡುವ ಪದ್ಧತಿಯನ್ನು ಸರ್ಕಾರ ಜಾರಿಗೆ ತರುವ ಯೋಜನೆ ಮಾಡುತ್ತಿದೆಯೇ?*

ಶ್ರೀ ಎಸ್. ಆರ್. ಮೋರೆ. (ಸಹಕಾರ ರಾಜ್ಯ ಸಚಿವರು)

ಅ) ಮತದಾರರ ವೃತ್ತಗಳನ್ನು ಮಾಡಿ ಪ್ರತಿ ವೃತ್ತದಿಂದ ಒಬ್ಬ ನಿರ್ದೇಶಕರನ್ನು ಆಯ್ಕೆ ಮಾಡುವ ಪದ್ಧತಿಯನ್ನು ಸಹಕಾರ ಸಂಘಗಳು ತಮ್ಮ ಬೈಲಾದಲ್ಲಿ ಅಳವಡಿಸಿಕೊಳ್ಳಲು ಸಹಕಾರ ಸಂಘಗಳ ನಿಯಮಗಳು 1960ರ 13ನೇ ನಿಯಮದ ಪ್ರಕಾರ ಅವಕಾಶ ಇದೆ. ಆದ್ದರಿಂದ, ಸರ್ಕಾರ ಈ ಪದ್ಧತಿಯನ್ನು ಜಾರಿಗೆ ತರುವ ಪ್ರಶ್ನೆ ಉದ್ಭವಿಸುವುದಿಲ್ಲ.

**ಸಹಕಾರ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಯ ಅಧಿಕಾರಿಗಳ ಸಂಖ್ಯೆ.**

3360 - ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡ ದೇವನ ಕೋಟೆ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಸಹಕಾರ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಯ ಅಧಿಕಾರಿಗಳ ಸಂಖ್ಯೆ ಎಷ್ಟು?*

*ಆ) ಸಹಕಾರ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ ಅಧಿಕಾರಿಗಳಿಗೆ ಸಂವಿಧಾನಬದ್ಧವಾಗಿ ಬಡ್ತಿ ನೀಡಲಾಗಿದೆಯೇ?*

*ಇ) ಸಹಕಾರ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಯ ಅಧಿಕಾರಿಗಳು ಹೊಂದಿರುವ ಹುದ್ದೆ ಮತ್ತು ಹೆಸರನ್ನು ತಿಳಿಸುವುದು?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ಸಹಕಾರ ಇಲಾಖೆಯಲಲ್ಲಿ ವಿವಿಧ ದರ್ಜೆಗಳಲ್ಲಿ ಒಟ್ಟು 40 ಪರಿಶಿಷ್ಟ ಜಾತಿಯ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.